# <u>ಸಾಕು ಮಾಡಿರವ್ವ ರಂಗನ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchha Rayaru, page No. 80.
2. **Note:** This song is not available in the books of Prof. S.K. Ramachandra Rao and also in the books of Sri. Pavanje Guru Rao and also in the books of Gorebala Hanumantha Rayaru.

ರಾಗ: ಆರಭಿ　　　　　　ತಾಳ: ಆದಿ

ಸಾಕು ಮಾಡಿರವ್ವ ರಂಗನ
ಏಕೆ ದೂರುವಿರೆ ?　　॥ ಪ ॥

ಬೆಟ್ಟು ಬಾಯೊಳಗಿಟ್ಟರೆ ರಂಗ – ಕಚ್ಚಲರಿಯನೆ
ಕಟ್ಟಿರುವೆಯನು ಕಂಡರೆ ಬವ್ವೆಂದು – ಚಿಟ್ಟನೆ ಚೀರುವನೆ
ರಟ್ಟೆಯ ಹಿಡಿದು ನಡಸಲು ರಂಗ – ದಟ್ಟಡಿ ಇಕ್ಕುವನೆ
ಭ್ರಷ್ಟ ಮಾತುಗಳನೆಷ್ಟೋ ಕಲ್ಪಿಸಿ
ಪಟ್ಟು ಪಟ್ಟಿಗೆ ರಟ್ಟು ಮಾಡುವುದ　　॥ 1 ॥

ಅರಿಯದಂತೆ ನೊರೆಹಾಲನು ಕುಡಿವನೆ – ಕರೆಕರೆ ಮಾಡುವನೆ
ಇರಲು ಮನೆಯೊಳಗೆ ಬರುತ ನಿಮ್ಮ ಮನೆ – ಮೊಸರನು ಸುರಿಯುವನೆ
…………………………………………………………………
ಸರಸಿಜಾಕ್ಷಿಯರೆ ಪರಿಪರಿಯಿಂದಲಿ
ಹರಲಿ ಮಾಡುವುದಿದು ತರವೇನಮ್ಮ　　॥ 2 ॥

ಚಿಕ್ಕ ಚಿಕ್ಕ ಗೋವಕ್ಕಳ ಕೂಡ ಚೆಂಡನಾಡುವಾಗ
…………………………………………………………………
…………………………………………………………………
ಸಿಕ್ಕಿತೆನುತ ಬಹು ಚಕ್ಕಂದಾಡುತ
ಗಕ್ಕನೆ ಹೋಗಿ ಕೈಯಿಕ್ಕಿ ತೆಗೆದನೆ　　॥ 3 ॥

ಮಾಲೆಗಂಬ-ದೋಪಾದಿಯಲಿ ನೀವು ಬಹಳ ಬೆಳೆದಿರೀಗ
ನೀಲಕುಂತಳೆಯೆ ದಧಿ ಶೋಧಿಸಿ ಓಲಾಡುತ ಕಡೆವಾಗ
ಬಾಲಕೃಷ್ಣನಿಗೆ ಜೋಲುವ ಕುಚಗಳು
ನಿಲುಕುವ ಬಗೆ ಹೇಗೆ ?
ಖೂಳ ಸೆಟವಿಯರು ಕಾಳವಾಗಿಹರು
ಕೇಳಿ ಕೇಳಿ ಬೇಸತ್ತಿಹೆನಮ್ಮ    ll 4 ll

ಫುಲ್ಲನಾಭನಿವ ಒಲ್ಲದನಾದರೆ ಎಲ್ಲ ಒಯ್ದಿಡ ಬೇಕೆ ?
ಖುಲ್ಲತನದಿ ನೀವ್ ನಿಲ್ಲಗೊಡದಿಹಿರಿ ಗುಲ್ಲುತನವು ಸಾಕೆ
.......................................................................................
ಸಲ್ಲದು ಈ ನುಡಿ ಪುರಂದರ ವಿಠಲಗೆ
ಹಲ್ಲೊಳಗಾತನ ಇಟ್ಟಿರ ಬೇಡಿ    ll 5 ll

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದು ಯಶೋದೆಯ ಮಾತು.  ಗೊಲ್ಲಸ್ತ್ರೀಯರಿಗೆ ಸುಳ್ಳು ಮಾತನ್ನು ಹೇಳುವಿರೆಂದು ರೋಸಿ, ಯಶೋದೆ ಮಾತನಾಡುತ್ತಾಳೆ.

**ಪಟ್ಟು ಪಟ್ಟಿಗೆ** = ಬಾರಿಬಾರಿಗೆ

**ಮಾಲಗಂಬ** = ದೀಪಮಾಲೆಯ ಕಂಬ

**ದಧಿ ಶೋಧಿಸಿ** = ಮೊಸರ ಕೆನೆ ತೆಗೆದು

**ಸೆಟವಿ** = ಒಂದು ಕ್ಷುದ್ರ ದೇವತೆ

**ಹಲ್ಲೊಳಗೆ ಇಡು** = ಮೇಲಿಂದ ಮೇಲೆ ಬಯ್ಯು

**Classification:** Keerthane
**Ankita:** purandara vittala
**Location:** NA
**Category:** Krishna Leele

**Sub-Category:** Krishna, Balakrishna, ranga, bayi, bayyi, halu, mane, gopi, yashode, kai,

**Pravachana:** NA

**Explanation:** NA